


بسم اللهِ الرّحمٰن الرّحيم

# ರಂಝಾನ್ ನಂತರವೂ ಅದರ ಒಳಿತನ್ನು ಮುಂದುವರಿಸಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **28–03–2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ- بِسْمِ اللهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಈ ರಮಝಾನಿನಿಂದ ಹಾದುಹೋಗಲು ಅಲ್ಲಾಹನು ನಮಗೆ ಸೌಭಾಗ್ಯವನ್ನು ನೀಡಿದ್ದಾನೆ. ನಮ್ಮಲ್ಲಿ ಹೆಚ್ಚಿನವರಿಗೆ ಉಪವಾಸ ಅನುಷ್ಠಿಸಲು ಮತ್ತು ಆರಾಧನೆಗಳನ್ನು ಮಾಡಲು ಸೌಭಾಗ್ಯ ನೀಡಿದ್ದು ಅಲ್ಲಾಹನ ಔದಾರ್ಯವಾಗಿದೆ. ಆದರೆ ಇದರ ಜೊತೆಗೆ, ಕೇವಲ ರಮಝಾನಿನ ಉಪವಾಸವನ್ನು ಇರಿಸುವುದರಿಂದ ಮತ್ತು ಆರಾಧನೆ ಮಾಡುವುದರಿಂದ ನಮ್ಮ ಉದ್ದೇಶವು ಪೂರ್ಣಗೊಳ್ಳುವುದಿಲ್ಲ. ಬದಲಾಗಿ ನೀವು ಸದಾ ನನ್ನ ಆರಾಧಕರಾಗಬೇಕು ಎಂದು ಅಲ್ಲಾಹನು ನಮ್ಮೊಡನೆ ನಿರ್ದೇಶಿಸಿದ್ದಾನೆ ಎಂಬುದನ್ನು ನಾವು ಗಮನದಲ್ಲಿಡಬೇಕು. ಆದ್ದರಿಂದ, ಈ ರಮಝಾನಿನಲ್ಲಿ ಆರಾಧನೆಯ ಸೌಭಾಗ್ಯವನ್ನು ಪಡೆದವರು ಈಗ ಈ ಒಳಿತುಗಳನ್ನು ಮುಂದುವರಿಸುವುದು ಅವರ ಕರ್ತವ್ಯವಾಗಿದೆ. ಅದಕ್ಕಾಗಿ ದುಆ ಮತ್ತು ಪ್ರಯತ್ನ ಸಹ ಮಾಡಬೇಕು.

ರಮಝಾನ್ ಎಷ್ಟು ಮುಖ್ಯವೋ, ಪ್ರತಿಯೊಂದು ನಮಾಝ್ ಮತ್ತು ಜುಮಾ ಸಹ ಅಷ್ಟೇ ಮುಖ್ಯವಾಗಿದೆ. ರಮಝಾನಿನ ಕೊನೆಯ ಜುಮಾ ಮಾತ್ರ ಅನುಗ್ರಹೀತವಾಗಿದೆ ಎಂದಲ್ಲ. ಪ್ರತಿಯೊಂದು ಜುಮಾ ಮುಖ್ಯ ಮತ್ತು ಅನುಗ್ರಹೀತವಾಗಿದೆ. ಈ ಕಾಲದಲ್ಲಿ, ಅಲ್ಲಾಹನು ಹಝ್ರತ್ ಮಸೀಹ್ ಮೌಊದ್[ಅ]ರನ್ನು ಕಳುಹಿಸಿದನು ಮತ್ತು ಅವರನ್ನು ನಂಬುವ ಸೌಭಾಗ್ಯ ನಮಗೆ ಲಭಿಸಿದೆ. ನಾವು ಹೇಗೆ ಉತ್ತಮ ಸತ್ಯವಿಶ್ವಾಸಿಗಳು ಮತ್ತು ಹಝ್ರತ್ ಪೈಗಂಬರ್[ಸ]ರ ಉತ್ತಮ ಅನುಯಾಯಿಗಳಾಗಬಹುದು ಎಂಬುದನ್ನು ಅವರು ನಮಗೆ ತಿಳಿಸಿಕೊಟ್ಟರು. ಅವರು ಒಂದು ಸಂದರ್ಭದಲ್ಲಿ ಹೀಗೆ ಹೇಳಿದರು: ನಾನು ನನ್ನ ಜಮಾಅತಿನ ಸಹೋದರರೊಡನೆ ಹಲವು ಬಾರಿ ಹೇಳಿದ್ದೇನೆ, ನೀವು ನನ್ನ ಬೈಅತ್ತಿನ ಮೇಲೆ ಮಾತ್ರ ಭರವಸೆ ಇರಿಸಬೇಡಿರಿ. ಅದರ ನೈಜತೆಯನ್ನು ನೀವು ಅರಿಯುವ ವರೆಗೆ ನಿಮಗೆ ಮೋಕ್ಷ ಲಭಿಸದು. ಶಿಷ್ಯನು ಸ್ವತಃ ಸತ್ಕರ್ಮಗಳನ್ನು ಮಾಡುವುದಿಲ್ಲವಾದರೆ ಗುರುವಿನ ಶ್ರೇಷ್ಠತೆಯು ಅವನಿಗೆ ಯಾವುದೇ ಪ್ರಯೋಜನವನ್ನು ನೀಡದು.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: 'ನಾನು ಕಿಶ್ತಿ ನೂಹ್ ಎಂಬ ಒಂದು ಪುಸ್ತಕವನ್ನು ಬರೆದಿದ್ದೇನೆ, ಈ ಪುಸ್ತಕವನ್ನು ಪದೇ ಪದೇ ಓದಿರಿ. ಪರಿಶುದ್ಧನಾದವನು ಯಶಸ್ವಿಯಾಗುತ್ತಾನೆ ಎಂದು ಅಲ್ಲಾಹನು ಹೇಳುತ್ತಾನೆ. ನೀವು ಅದರ ಪ್ರಕಾರ ನಡೆದರೆ ಮಾತ್ರ ಪ್ರಯೋಜನ ಉಂಟಾಗುವುದು. ನಾವು ಹಝ್ರತ್ ಪೈಗಂಬರ್[ಸ]ರ ಅನುಯಾಯಿಗಳು ಎಂದು ಸಾವಿರಾರು ಕಳ್ಳರು, ವ್ಯಭಿಚಾರಿಗಳು, ದುಷ್ಟರು, ಕುಡುಕರು, ಗೂಂಡಾಗಳು ಹೇಳಿಕೊಳ್ಳುತ್ತಾರೆ. ಆದರೆ ನಿಜವಾಗಿಯೂ ಅವರು ಹಾಗಿದ್ದಾರೆಯೇ? ಅವರು ಹಝ್ರತ್ ಪೈಗಂಬರ್[ಸ]ರ ಅನುಯಾಯಿಗಳೆಂದು ಕರೆಸಿಕೊಳ್ಳುವ ಹಕ್ಕನ್ನು ಹೊಂದಿದ್ದಾರೆಯೇ? ಖಂಡಿತವಾಗಿಯೂ ಇಲ್ಲ. ಹಝ್ರತ್ ಪೈಗಂಬರ್[ಸ]ರ ಬೋಧನೆಗಳನ್ನು ಸಂಪೂರ್ಣವಾಗಿ ಅನುಸರಿಸುವವನೇ ನಿಜವಾದ ಅನುಯಾಯಿ.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ನೀವು ಈ ಜಮಾಅತಿಗೆ ಸೇರಿರುವುದಾದರೆ ಅದರ ಬೋಧನೆಗಳನ್ನು ಅನುಸರಿಸಬೇಕು. ಜಮಾಅತಿಗೆ ಸೇರಿದ ನಂತರ ಕಷ್ಟಗಳು ಕೂಡ ಬರುವುವು. ಕಷ್ಟಗಳು ಬರದಿದ್ದರೆ ಪ್ರತಿಫಲ ಹೇಗೆ ಸಿಗುವುದು? ಹದಿಮೂರು ವರ್ಷಗಳ ಕಾಲ ಹಝ್ರತ್ ಪೈಗಂಬರ್[ಸ] ಮಕ್ಕಾದಲ್ಲಿ ಕಷ್ಟ ಅನುಭವಿಸಿದರು. ಆ ಕಾಲದ ಕಷ್ಟಗಳು ಏನಾಗಿತ್ತು ಎಂದು ನಿಮಗೆ ಗೊತ್ತಿಲ್ಲ. ಆದ್ದರಿಂದ ಯಾವಾಗಲೂ ನೆನಪಿಡಿ, ಕಷ್ಟಗಳು ಖಂಡಿತವಾಗಿಯೂ ಬರುತ್ತವೆ. ಆದರೆ ಈ ಕಷ್ಟಗಳು ಹಝ್ರತ್ ಪೈಗಂಬರ್[ಸ] ಮತ್ತು ಸಹಾಬಿಯರಿಗೆ ಉಂಟಾಗುತ್ತಿದ್ದಾಗಲೂ ಹಝ್ರತ್ ಪೈಗಂಬರ್[ಸ] ತಾಳ್ಮೆಯಿಂದ ಇರಲು ಕಲಿಸಿದರು. ಇದರ ಫಲಿತಾಂಶವೇನಾಯಿತು? ಇದರ ಫಲಿತಾಂಶವೆಂದರೆ, ಕೊನೆಗೆ ಶತ್ರುಗಳು ನಾಶವಾದರು. ಆ ಸಮಯದಲ್ಲಿ ಈ ದುಷ್ಟ ಜನರು ಇರಲಾರರು ಎಂದು ನೀವು ನೋಡುವಿರಿ. ಈ ಜಮಾಅತನ್ನು ಲೋಕದಲ್ಲಿ ಹರಡಲು ಅಲ್ಲಾಹನು ನಿರ್ಧರಿಸಿದ್ದಾನೆ. ನೀವು ಸ್ವಲ್ಪ ಸಂಖ್ಯೆಯಲ್ಲಿ ಇರುವುದನ್ನು ಕಂಡು ಅವರು ಕಷ್ಟ ಕೊಡುತ್ತಾರೆ. ಆದರೆ ಜಮಾಅತ್ ವಿಸ್ತಾರಗೊಳ್ಳುವಾಗ ಅವರು ತಾವಾಗಿಯೇ ಮೌನವಾಗುವರು. ಇದೇ ಜಗತ್ತಿನ ನಿಯಮ ಮತ್ತು ಇದನ್ನೇ ಪ್ರವಾದಿಗಳ ಜಮಾಅತಿನ ಚರಿತ್ರೆಯಲ್ಲಿ ನಾವು ನೋಡಿದ್ದೇವೆ.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ತಾಳ್ಮೆಯು ಒಂದು ಆರಾಧನೆಯಾಗಿದೆ. ನಮ್ಮ ಜಮಾಅತ್ ಅಲ್ಲಾಹನ ಬೆಂಬಲದಲ್ಲಿದೆ. ಕಷ್ಟಗಳನ್ನು ಅನುಭವಿಸುವುದರಿಂದ ನಂಬಿಕೆ ಬಲಗೊಳ್ಳುತ್ತದೆ. ಸಹನೆಯಂತಹ ಯಾವುದೇ ಸಂಗತಿಯಿಲ್ಲ. ತಖ್ವಾದ ಬಗ್ಗೆ ಉಪದೇಶಿಸುತ್ತಾ, ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ನಿಜವಾದ ಮುಸ್ಲಿಮರು ಆರಂಭದಲ್ಲಿ ತಾಳ್ಮೆಯಿಂದಿರಬೇಕಾಗುತ್ತದೆ, ಸಹಾಬಿಯರ[ರ] ಮೇಲೂ ಅಂತಹ ಸಮಯ ಬಂದಿತ್ತು ಎಂದು ಇತಿಹಾಸ ಹೇಳುತ್ತದೆ. ಮನುಷ್ಯನು ತಖ್ವಾ ಕೈಗೊಳ್ಳುವಾಗ, ಅಲ್ಲಾಹನು ಅವನಿಗಾಗಿ ಬಾಗಿಲು ತೆರೆಯುತ್ತಾನೆ. ಮಾನವರ ಹಕ್ಕುಗಳ ಬಗ್ಗೆ ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಒಟ್ಟಿಗೆ ಕುಳಿತುಕೊಳ್ಳಿ, ನೀವು ಒಬ್ಬರನ್ನೊಬ್ಬರು ಎಷ್ಟು ಪ್ರೀತಿಸುತ್ತೀರೋ, ಅಲ್ಲಾಹನು ನಿಮ್ಮನ್ನು ಅಷ್ಟೇ ಪ್ರೀತಿಸುವನು. ಒಂದೆಡೆ ಅವರು ಉಪದೇಶ ನೀಡುತ್ತಾ ಹೀಗೆ ಹೇಳಿದರು: ಎಲ್ಲೆಡೆ ದುರ್ಮಾರ್ಗ, ಅಸಡ್ಡೆ ಮತ್ತು ತಪ್ಪು ಮಾರ್ಗದ

ಗಾಳಿ ಬೀಸುತ್ತಿರುವ ಈ ಕಷ್ಟಕಾಲದಲ್ಲಿ ನಮ್ಮ ಜಮಾಅತಿನವರು ತಖ್ವಾ ಕೈಗೊಳ್ಳಲೇ ಬೇಕು.

(ಹುಝೂರ್ ಹೇಳಿದರು:) ಇಂದಿನ ಕಾಲದಲ್ಲಿ ಕೆಡುಕಿನ ಕಡೆಗೆ ಕರೆದೊಯ್ಯಲು ಬಳಸಲಾಗದ ಯಾವ ಸಾಧನವಿದೆ! ಇಂತಹ ಸಮಯದಲ್ಲಿ ನಾವು ಈ ಪಾಪಗಳ ಮಾರ್ಗದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುವುದು ನಮ್ಮ ಕರ್ತವ್ಯವಾಗಿದೆ. ತಖ್ವಾ ಬಾಯಿಮಾತಿನಿಂದ ಮಾತ್ರ ಲಭಿಸುವ ಸಂಗತಿಯಲ್ಲ. ಆದರೆ ಶೈತಾನನು ದಾರಿ ತಪ್ಪಿಸುತ್ತಾನೆ. ತಖ್ವಾ ಕೈಗೊಳ್ಳುವವರಿಗೆ ಅದು ತಿಳಿದಿರುತ್ತದೆ. ಇದರಿಂದ ಮನುಷ್ಯನ ದೌರ್ಬಲ್ಯ ತಿಳಿದು ಬರುತ್ತದೆ. ಆದ್ದರಿಂದ ತಖ್ವಾದ ಮಾರ್ಗದಲ್ಲಿ ನಡೆಯುವವರು ಬಹಳ ಎಚ್ಚರಿಕೆಯಿಂದ ಹೆಜ್ಜೆ ಇಡಬೇಕಾಗುತ್ತದೆ. ಎಲ್ಲ ಶಕ್ತಿಗಳ ಮೂಲವು ದೇವನೇ ಆಗಿದ್ದಾನೆ ಎಂಬ ಖಚಿತತೆ ಮನುಷ್ಯನಿಗೆ ಇರುವಾಗ ಮಾತ್ರ ಇದು ಸಾಧ್ಯ. ಮುತ್ತಖಿಯಾಗಲು ವ್ಯಭಿಚಾರ, ಕಳ್ಳತನ, ಹಕ್ಕುಗಳ ಉಲ್ಲಂಘನೆ, ತೋರಿಕೆ, ಅಹಂಕಾರ, ತಿರಸ್ಕಾರ, ಜಿಪುಣತೆ ಮುಂತಾದ ದೊಡ್ಡ ವಿಷಯಗಳನ್ನು ತ್ಯಜಿಸುವುದರೊಂದಿಗೆ ಕೆಟ್ಟ ಸ್ವಭಾವಗಳಿಂದ ದೂರವಿರಬೇಕು ಮತ್ತು ಅವುಗಳಿಗೆ ಬದಲಾಗಿ ಉತ್ತಮ ಸ್ವಭಾವಗಳನ್ನು ಬೆಳೆಸಬೇಕು. ಎಂದರೆ ಕೆಡುಕುಗಳನ್ನು ತ್ಯಜಿಸುವುದು ಮಾತ್ರ ಸಾಕಾಗಲಾರದು. ಬದಲಿಗೆ ಒಳ್ಳೆಯ ಸ್ವಭಾವ ಕೈಗೊಳ್ಳುವುದು ಅವಶ್ಯಕ, ಆಗಲೇ ನಿಜವಾದ ತಖ್ವಾ ಆಗುವುದು.

ಒಳ್ಳೆಯ ಕಾರ್ಯಗಳಲ್ಲಿ ಮುನ್ನಡೆಯಲು ಅಗತ್ಯವಿರುವ ಇತರ ವಿಷಯಗಳೆಂದರೆ ಜನರೊಂದಿಗೆ ಸಭ್ಯವಾಗಿ ವರ್ತಿಸುವುದು, ಒಳ್ಳೆಯ ನಡತೆ ತೋರಿಸುವುದು, ಸಹಾನುಭೂತಿ ತೋರುವುದು, ಅಲ್ಲಾಹನೊಂದಿಗೆ ನಿಜವಾದ ನಿಷ್ಠೆ ಮತ್ತು ಪ್ರಾಮಾಣಿಕತೆ ತೋರಿಸುವುದು, ಈ ವಿಷಯಗಳಿಂದ ಮನುಷ್ಯನು ಮುತ್ತಖಿ ಎಂದು ಕರೆಯಲ್ಪಡುತ್ತಾನೆ. ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಅಲ್ಲಾಹನು ಸ್ವತಃ ಅಂತಹ ಜನರ ಸಂರಕ್ಷಕನಾಗುತ್ತಾನೆ. ಏಕೆಂದರೆ ಅವರಿಗೆ ಯಾವುದೇ ಭಯವಿರದು ಮತ್ತು ಅವರು ದುಃಖಿತರಾಗಲಾರರು ಎಂದು ಅಲ್ಲಾಹನು ಸ್ವತಃ ಹೇಳುತ್ತಾನೆ. ಅವನು ಸಜ್ಜನರ ರಕ್ಷಕನಾಗುತ್ತಾನೆ ಎಂದು ಅಲ್ಲಾಹನು ಇನ್ನೊಂದೆಡೆ ಹೇಳುತ್ತಾನೆ. ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ನಿಮ್ಮ ಹೃದಯದಲ್ಲಿ ದೇವನ ಪ್ರೀತಿ ಮತ್ತು ಮಹಿಮೆಯನ್ನು ಯಾವಾಗಲೂ ಇರಿಸಿಕೊಳ್ಳಿರಿ. ಅದಕ್ಕಾಗಿ ನಮಾಝ್‌ಗಿಂತ ದೊಡ್ಡದಾದ ಸಂಗತಿಯಿಲ್ಲ. ದೇವನ ಮುಂದೆ ನಿಮ್ಮ ಒಳಿತುಗಳನ್ನು ಮುಂದುರಿಸುವುದು ಮತ್ತು ಅವನ ಹಕ್ಕನ್ನು ಪೂರೈಸುವುದು ಮುಖ್ಯ ವಿಷಯವಾಗಿದೆ. ಅದಕ್ಕಾಗಿ ನಮಾಝ್ ಅತ್ಯುನ್ನತ ಸಂಗತಿಯಾಗಿದೆ.

ರಮಝ಼ಾನಿನಿಂದ ನಾವು ಹಾದುಹೋಗಿದ್ದೇವೆ, ನಮಾಝ್‌ಗಳ ಸ್ಥಿತಿಯಿಂದ ನಾವು ಹಾದುಹೋಗಿದ್ದೇವೆ, ಒಳಿತುಗಳ ಸ್ಥಿತಿಯಿಂದ ನಾವು ಹಾದುಹೋಗಿದ್ದೇವೆ, ಈಗ ಅವುಗಳನ್ನು ರಮಝ಼ಾನಿನ ನಂತರ ಮುಂದುವರಿಸುವುದು ಅಲ್ಲಾಹನ ಕಾರುಣ್ಯವನ್ನು ಸೆಳೆಯಲು ಅವಶ್ಯಕವಾಗಿದೆ. ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಉಪವಾಸಗಳು ವರ್ಷಕ್ಕೊಮ್ಮೆ ಬರುತ್ತವೆ, ಝಕಾತನ್ನು ಶ್ರೀಮಂತರು ನೀಡಬೇಕಾಗುತ್ತದೆ. ಅದು ಕೂಡ ಒಂದು ಒಳಿತಾಗಿದೆ. ಆದರೆ ನಮಾಝ್ ಪ್ರತಿ ವ್ಯಕ್ತಿಯು ಐದು ಹೊತ್ತು ನಿರ್ವಹಿಸಬೇಕಾದ ಸಂಗತಿಯಾಗಿದೆ. ಅದನ್ನು ಎಂದಿಗೂ ಬಿಡಬಾರದು. ಅದನ್ನು ಪದೇ ಪದೇ ಅನುಷ್ಠಿಸಿರಿ. ಅವನು ಬಯಸಿದರೆ ಈಗಲೇ ಸ್ವೀಕಾರ ಮಾಡಲು ಶಕ್ತಿಯುಳ್ಳವನ ಮುಂದೆ ನಿಂತಿದ್ದೇನೆ ಎಂಬ ಆಲೋಚನೆಯಿಂದ ಅದನ್ನು ನಿರ್ವಹಿಸಬೇಕು.

ಹಝ್ರತ್ ಮಸೀಹ್ ಮೌಊದ್ ಹೇಳುತ್ತಾರೆ: ನಮ್ಮ ಜಮಾಅತಿಗೆ ಅಗತ್ಯವಿರುವುದೇನೆಂದರೆ, ಅವರ ಈಮಾನ್ ಹೆಚ್ಚಾಗಬೇಕು, ಅಲ್ಲಾಹನ ಮೇಲೆ ನಿಜವಾದ ದೃಢವಿಶ್ವಾಸ ಮತ್ತು ಅರಿವು ಉಂಟಾಗಬೇಕು, ಒಳ್ಳೆಯ ಕಾರ್ಯಗಳಲ್ಲಿ ಅಸಡ್ಡೆ ಮತ್ತು ಆಲಸ್ಯ ಇರಬಾರದು, ಏಕೆಂದರೆ ಸೋಮಾರಿತನವಿದ್ದರೆ ವುಝು ಮಾಡುವುದು ಕೂಡ ಕಷ್ಟವಾಗುತ್ತದೆ, ಇನ್ನು ತಹಜ್ಜುದ್ ನಿರ್ವಹಿಸುವುದರ ಬಗ್ಗೆ ಏನು ಹೇಳಲಿ. ಒಳ್ಳೆಯ ಕಾರ್ಯಗಳನ್ನು ಮಾಡುವ ಶಕ್ತಿ ಉಂಟಾಗದಿದ್ದರೆ ಮತ್ತು ಒಳ್ಳೆಯ ಕಾರ್ಯಗಳಲ್ಲಿ ಸ್ಪರ್ಧಿಸುವ ಉತ್ಸಾಹವಿಲ್ಲದಿದ್ದರೆ ನಮ್ಮೊಂದಿಗೆ ಸಂಬಂಧ ಹೊಂದುವುದು ನಿರುಪಯುಕ್ತವಾಗಿದೆ. ನಮ್ಮ ಬೋಧನೆಯನ್ನು ತಮ್ಮ ಮಾರ್ಗದರ್ಶನವೆಂದು ಪರಿಗಣಿಸುವ ಮತ್ತು ತಮ್ಮ ಸಾಮರ್ಥ್ಯ ಮತ್ತು ಪ್ರಯತ್ನಕ್ಕೆ ಅನುಗುಣವಾಗಿ ಅದನ್ನು ಅನುಸರಿಸುವವರು ಮಾತ್ರ ನಮ್ಮ ಜಮಾಅತಿಗೆ ಸೇರುತ್ತಾರೆ. ಕೇವಲ ಹೆಸರಿಗಾಗಿ ಸೇರಿ ಬೋಧನೆಗಳ ಪ್ರಕಾರ ನಡೆಯದವರು ನೆನಪಿಡಬೇಕು, ಅಲ್ಲಾಹನು ಈ ಜಮಾಅತನ್ನು ಒಂದು ವಿಶೇಷ ಜಮಾಅತ್ ಆಗಿ ಮಾಡಲು ನಿರ್ಧರಿಸಿದ್ದಾನೆ. ಕೇವಲ ಹೆಸರನ್ನು ಬರೆಯಿಸುವುದರಿಂದ ಯಾರೂ ಜಮಾಅತಿನಲ್ಲಿ ಉಳಿಯಲು ಸಾಧ್ಯವಿಲ್ಲ. ಆದ್ದರಿಂದ, ಸಾಧ್ಯವಾದಷ್ಟು ಮಟ್ಟಿಗೆ, ನೀಡಲಾಗುವ ಬೋಧನೆಗಳ ಪ್ರಕಾರ ನಿಮ್ಮ ಕಾರ್ಯಗಳನ್ನು ಮಾಡಿರಿ.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಸತ್ಕರ್ಮಗಳು ರೆಕ್ಕೆಗಳಂತೆ, ಸತ್ಕರ್ಮಗಳಿಲ್ಲದೆ ಮನುಷ್ಯನು ಆಧ್ಯಾತ್ಮಿಕ ಮಟ್ಟಕ್ಕೆ ಹಾರಲು ಸಾಧ್ಯವಿಲ್ಲ. ದೇವನ ಮೇಲಿನ ಪ್ರೀತಿಯ ಅರ್ಥವೇನು? ಇದರ ಅರ್ಥವೇನೆಂದರೆ, ನಿಮ್ಮ ತಂದೆತಾಯಿಗಳು, ನಿಮ್ಮ ಪತ್ನಿಯರು, ನಿಮ್ಮ ಮಕ್ಕಳು ಮತ್ತು ನಿಮ್ಮ ಸ್ವಂತ ಆತ್ಮ ಸೇರಿದಂತೆ ಎಲ್ಲದಕ್ಕಿಂತ ದೇವನ ಇಚ್ಛೆಗೆ ಪ್ರಾಮುಖ್ಯತೆ ನೀಡುವುದು. ಆದ್ದರಿಂದಲೇ ನಿಮ್ಮ ತಂದೆಯವರನ್ನು ನೀವು ನೆನಪಿಸಿಕೊಳ್ಳುವ ರೀತಿಯಲ್ಲಿ ದೇವನನ್ನು ನೆನಪಿಸಿಕೊಳ್ಳಿ, ಅದಕ್ಕಿಂತಲೂ ಹೆಚ್ಚು ಪ್ರೀತಿಯಿಂದ ನೆನಪಿಸಿಕೊಳ್ಳಿ ಎಂದು ಪವಿತ್ರ ಖುರ್‌ಆನಿನಲ್ಲಿ ಹೇಳಲಾಗಿದೆ.

(ಹುಝೂರ್ ಹೇಳಿದರು:) ಈ ರಮಝ಼ಾನಿನಲ್ಲಿ ನಾವು ಉನ್ನತ ಸ್ವಭಾವಗಳು ಮತ್ತು ಆರಾಧನೆಗಳ ಕಡೆಗೆ ಗಮನ ಹರಿಸಿರುವುದಾದರೆ, ಈ ಗಮನವು ಈಗ ವರ್ಷಪೂರ್ತಿ ಮುಂದುವರಿಯಬೇಕು. ಈ ಪ್ರಯತ್ನವು ರಮಝ಼ಾನಿನೊಂದಿಗೆ ಕೊನೆಗೊಳ್ಳಬಾರದು, ಬದಲಿಗೆ ವರ್ಷಪೂರ್ತಿ ಮುಂದುವರಿಯಬೇಕು. ಈ ಪ್ರಯತ್ನವು ವರ್ಷಪೂರ್ತಿ ಮುಂದುವರಿದರೆ ಮಾತ್ರ ನಮ್ಮ ಜೀವನದ ನಿಜವಾದ ಉದ್ದೇಶವನ್ನು ನಾವು ಸಾಧಿಸಲು ಸಾಧ್ಯವಾಗುವುದು. ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ನೀವು ಲೌಕಿಕ ಜನರಂತೆ ಇರುವುದಾದರೆ ಅದರಿಂದ ಯಾವುದೇ ಪ್ರಯೋಜನವಿಲ್ಲ. ನೀವು ನನ್ನ ಕೈಯಲ್ಲಿ ತೌಬಾ (ಪಶ್ಚಾತ್ತಾಪ) ಮಾಡಿದ್ದೀರಿ, ನನ್ನ ಕೈಯಲ್ಲಿ ತೌಬಾ ಮಾಡುವುದು ಒಂದು ಮರಣವನ್ನು ಬಯಸುತ್ತದೆ. ಇದರಿಂದ ನೀವು ಹೊಸ ಜೀವನದಲ್ಲಿ ಮತ್ತೊಂದು ಜನ್ಮವನ್ನು ಪಡೆಯುತ್ತೀರಿ. ಬೈಅತ್ (ನಿಷ್ಠೆಯ ಪ್ರತಿಜ್ಞೆ) ಹೃದಯದಿಂದ ಬರದಿದ್ದರೆ ಅದರಿಂದ ಯಾವುದೇ ಪ್ರಯೋಜನವಿಲ್ಲ. ನನ್ನ ಕೈಯಲ್ಲಿ

ಬೈಅತ್ ಮಾಡುವುದರಿಂದ ಅಲ್ಲಾಹನು ಹೃದಯದ ಒಪ್ಪಿಗೆಯನ್ನು ಬಯಸುತ್ತಾನೆ. ಆದ್ದರಿಂದ, ಯಾರು ನನ್ನನ್ನು ಪ್ರಾಮಾಣಿಕ ಹೃದಯದಿಂದ ಸ್ವೀಕರಿಸುತ್ತಾನೋ, ತಮ್ಮ ಪಾಪಗಳಿಗಾಗಿ ಪ್ರಾಮಾಣಿಕವಾಗಿ ಪಶ್ಚಾತ್ತಾಪ ಮಾಡುತ್ತಾನೋ, ಖಂಡಿತವಾಗಿಯೂ ಅವನ ಪಾಪಗಳನ್ನು ಕ್ಷಮಿಸುವವನೂ ಕರುಣಾಮಯಿಯಾದ ದೇವನು ಕ್ಷಮಿಸುವನು. ಅವನು ತಾಯಿಯ ಹೊಟ್ಟೆಯಿಂದ ಹೊರಬಂದವನಂತೆ ಆಗುತ್ತಾನೆ, ಆಗ ದೇವದೂತರು ಅವನನ್ನು ಸಂರಕ್ಷಿಸುವರು. ಒಂದು ಹಳ್ಳಿಯಲ್ಲಿ ಒಬ್ಬ ಸಾತ್ವಿಕನಿದ್ದರೆ, ದೇವನು ಆ ಸಾತ್ವಿಕನಿಗಾಗಿ ಆ ಹಳ್ಳಿಯನ್ನು ನಾಶದಿಂದ ರಕ್ಷಿಸುತ್ತಾನೆ. ಆದರೆ ನಾಶವು ಬಂದರೆ, ಅದು ಎಲ್ಲರ ಮೇಲೆ ಬರುತ್ತದೆ, ಆದರೂ ಅಲ್ಲಾಹನು ತನ್ನ ಇಷ್ಟದಾಸರನ್ನು ಹೇಗಾದರೂ ರಕ್ಷಿಸುತ್ತಾನೆ.

(ಖುತ್ಬದ ಕೊನೆಯಲ್ಲಿ ಹುಝೂರ್ ಹೇಳಿದರು:) ಇಂದಿನ ಜಗತ್ತಿನ ಪರಿಸ್ಥಿತಿಯಲ್ಲಿ, ನಾವು ನಮ್ಮನ್ನು, ನಮ್ಮ ಸಂತಾನಗಳನ್ನು ಮತ್ತು ಜಗತ್ತನ್ನು ರಕ್ಷಿಸಲು ಪ್ರಯತ್ನಿಸಬೇಕು ಹಾಗೂ ಜಗತ್ತಿನಲ್ಲಿ ತೌಹೀದನ್ನು ಸ್ಥಾಪಿಸಲು ಪ್ರಯತ್ನಿಸಬೇಕು, ಲೋಕವನ್ನು ಹಝ್ರತ್ ಪೈಗಂಬರ್[ಸ]ರ ಧ್ವಜದ ಕೆಳಗೆ ತರಲು ಪ್ರಯತ್ನಿಸಬೇಕು. ಅದಕ್ಕಾಗಿ ನಾವು ನಮ್ಮಲ್ಲಿ ಸ್ಥಾಯಿಯಾದ ಒಂದು ವಿಶೇಷ ಬದಲಾವಣೆಯನ್ನು ಉಂಟುಮಾಡಬೇಕಾಗುವುದು, ಯಾವಾಗಲೂ ಪ್ರಾರ್ಥನೆಗಳನ್ನು ನಮ್ಮ ಜೀವನದ ಭಾಗವಾಗಿಸಬೇಕಾಗುವುದು. ಹಾಗೆ ಆದರೆ ನಾವು ನಮ್ಮನ್ನು ಮತ್ತು ಲೋಕವನ್ನು ರಕ್ಷಿಸಿಕೊಳ್ಳಬಹುದು. ಏಕೆಂದರೆ ಜಗತ್ತು ಬಹಳ ವೇಗವಾಗಿ ನಾಶದ ಕಡೆಗೆ ಸಾಗುತ್ತಿದೆ. ದೇವನು ಇಚ್ಛಿಸಿದರೆ ಜಗತ್ತಿನ ಸುಧಾರಣೆಗಾಗಿ ವ್ಯವಸ್ಥೆಗಳನ್ನು ಮಾಡಬಹುದು. ಅವರ ಹೃದಯಗಳನ್ನು ತಿರುಗಿಸಿ ಅವರನ್ನು ನಾಶದಿಂದ ರಕ್ಷಿಸಬಹುದು. ಅಥವಾ ನಾಶವು ಸಂಭವಿಸಲೇ ಬೇಕೆಂದಿದ್ದರೆ, ಅಲ್ಲಾಹನು ಸತ್ಯವಿಶ್ವಾಸಿಗಳನ್ನು ಅದರಿಂದ ರಕ್ಷಿಸಲಿ. ಅದಕ್ಕಾಗಿ ಅಲ್ಲಾಹನ ಅನುಗ್ರಹವು ಯಾವಾಗಲೂ ನಮ್ಮ ಮೇಲೆ ಉಂಟಾಗುವ ರೀತಿಯಲ್ಲಿ ನಾವು ನಮ್ಮ ಸತ್ಕರ್ಮಗಳನ್ನು ನಿರ್ವಹಿಸಬೇಕು ಮತ್ತು ರೂಪಿಸಿಕೊಳ್ಳಬೇಕು. ನಮ್ಮ ಆರಾಧನೆಗಳನ್ನು ನಾವು ಹೇಗೆ ಜೀವಂತವಾಗಿರಿಸಬೇಕು, ಅಲ್ಲಾಹನೊಂದಿಗೆ ನಾವು ಹೇಗೆ ಸಂಬಂಧವನ್ನು ಬೆಳೆಸಿಕೊಳ್ಳಬೇಕು, ನಾವು ತಖ್ವದಲ್ಲಿ ಹೇಗೆ ನಡೆಯಬೇಕು, ನಾವು ಉನ್ನತ ನೈತಿಕತೆಗಳನ್ನು ಹೇಗೆ ತೋರಿಸಬೇಕು, ನಾವು ಲೋಕದಲ್ಲಿ ತೌಹೀದನ್ನು ಹೇಗೆ ಸ್ಥಾಪಿಸಬೇಕು, ನಾವು ಲೋಕವನ್ನು ನಾಶದಿಂದ ಹೇಗೆ ರಕ್ಷಿಸಬೇಕು, ಲೋಕದ ನಾಶ ಮತ್ತು ದಾಳಿಗಳಿಂದ ನಮ್ಮನ್ನು ನಾವು ಹೇಗೆ ರಕ್ಷಿಸಿಕೊಳ್ಳಬೇಕು ಎಂಬುದರ ನಿಜವಾದ ಅರಿವನ್ನು ನಾವು ಹೊಂದುವಂತೆ ಅಲ್ಲಾಹನು ಮಾಡಲಿ. ಹಾಗೆ ಆದರೆ ಹಾಗೂ ಈ ಭಾವನೆಗಳು ನಮ್ಮಲ್ಲಿ ಉಂಟಾದರೆ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬೈಅತ್ತಿನ ಹಕ್ಕನ್ನು ಪೂರೈಸಲು ಸಾಧ್ಯವಾಗುವುದು. ನಾವು ಈ ಬೈಅತ್ತಿನ ಹಕ್ಕನ್ನು ಪೂರೈಸುವವರಾಗಲಿ. ಈ ರಮಝ಼ಾನ್ ನಮಗೆ ಅನುಗ್ರಹಗಳಿಗೆ ಕಾರಣವಾಗಲಿ. ಅಲ್ಲಾಹನು ತನ್ನ ಕರುಣೆ ಮತ್ತು ಅನುಗ್ರಹದಿಂದ ನಮ್ಮನ್ನು ಅನುಗ್ರಹಿಸಲಿ. ನಮ್ಮ ರಮಝ಼ಾನಿನ ಮುಂದಿನ ದಿನಗಳಲ್ಲಿ ಮತ್ತು ಇಡೀ ವರ್ಷ ಮತ್ತು ಮುಂದಿನ ರಮಝ಼ಾನಿನ ವರೆಗೆ ನಾವು ಅಲ್ಲಾಹನ ಆರಾಧನೆಯ ಹಕ್ಕನ್ನು ಪೂರೈಸುವವರಾಗಲಿ. ಅವನ ದಾಸರ ಹಕ್ಕುಗಳನ್ನು ಪೂರೈಸುವವರಾಗಲಿ. ಅಲ್ಲಾಹನು ನಮಗೆ ಅದರ ಸೌಭಾಗ್ಯವನ್ನು ನೀಡಲಿ.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَآءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ۔


***Friday Sermon delivered by Hadrath Khaleefatul Masih Al Khamis***[atba]

At, ***'Masjid Mubarak'***, *Islamabad*, *Tilford*, U.K. On 28-03-2025

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha'at Team for Nazarath Nashr-O-Isha'ath, Qadian

***Email****:* *khutuba.kannada@gmail.com*

**You can find all the Sermons archived at**: www.alislam.org/friday-sermon